**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ**

**ಸಿ.ಸಿ.ನಂಃ 1367/2024**

**ಫಿರ್ಯಾದುದಾರರುಃ** ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರು

-: **ವಿರುದ್ಧ** :-

**ಆರೋಪಿಃ**

1. ಶ್ರೀ ಸುರೇಶ,
ಬಿನ್ ಶ್ರೀ ಮರುಳಸಿದ್ದಪ್ಪ,
40 ವರ್ಷಗಳು,

2. ಶ್ರೀಮತಿ ಮಮತಾ,
ಕೋಂ ಶ್ರೀ ಸುರೇಶ,
30 ವರ್ಷಗಳು,

3. ಶ್ರೀಮತಿ ಗಿರಿಜಮ್ಮ,
ಕೋಂ ಶ್ರೀ ಮರುಳಸಿದ್ದಪ್ಪ,
65 ವರ್ಷಗಳು,

ಎಲ್ಲರ ವಾಸಃ ಕಣಬಕಟ್ಟೆ ಗ್ರಾಮ,
ಅಜ್ಜಂಪುರ ತಾಲ್ಲೂಕು.

**ದೋಷಾರೋಪಣೆ**

ಶ್ರೀ. ರಾಹುಲ್ ಶೆಟ್ಟಿಗಾರ್, ಬಿ.ಕಾಂ.(Hons.), ಎಲ್‌ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 08.07.2024 ರಂದು ಬೆಳಿಗ್ಗೆ 8.30 ಗಂಟೆಗೆ ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ಕಣಬಗಟ್ಟೆ ಗ್ರಾಮದಲ್ಲಿ ಚಾಸಾ-1/ ಶ್ರೀಮತಿ ರತ್ನಮ್ಮ ರವರು ನಲ್ಲಿಯಲ್ಲಿ ನೀರು ಹಿಡಿಯುತ್ತಿರುವಾಗ ಅಪರಾಧವನ್ನು ಮಾಡುವ ಸಮಾನ ಉದ್ದೇಶದಿಂದ ನಿಮ್ಮಲ್ಲಿ 2 ನೇ ಆರೋಪಿ ನೀರು ಹಿಡಿಯುವ ವಿಚಾರದಲ್ಲಿ ಅವಾಚ್ಯವಾಗಿ ಬೈಯುತ್ತಿರುವಾಗ ಮನೆಯ ಒಳಗೆ ಇದ್ದ ನಿಮ್ಮಲ್ಲಿ 1 ನೇ ಆರೋಪಿ ಚಾಸಾ-1 ರವರಿಗೆ ಅವರ ಶಾಂತಿಭಂಗ ಮಾಡುವ ಉದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದು ಅವಮಾನಿಸಿರುತ್ತೀರಿ. ಈ ರೀತ್ಯ 1 ರಿಂದ 3 ನೇ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತಾ ಕಲಂ 352 ಸಹವಾಚಕ ಕಲಂ 3(5) ರಂತೆ ದಂಢಿಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, ನಿಮ್ಮಲ್ಲಿ 1 ನೇ ಆರೋಪಿ ಚಾಸಾ-1 ರವರಿಗೆ ನೀನು ನನ್ನ ಹೆಂಡತಿಗೆ ಯಾಕೆ ಬೈಯುತ್ತೀಯಾ ಎಂದು ಎಡದ ಕಿವಿಗೆ ಕೈಯಿಂದ ಹೊಡೆದಿರುತ್ತೀರಿ ಹಾಗೂ ನಿಮ್ಮಲ್ಲಿ 3 ನೇ ಆರೋಪಿ ಚಾಸಾ-1 ರವರ ತಲೆ ಕೂದಲನ್ನು ಹಿಡಿದು ಕೆಳಗೆ ಬೀಳಿಸಿರುತ್ತೀರಿ ಮತ್ತು ಅವರಿಗೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಈ ರೀತ್ಯ 1 ರಿಂದ 3 ನೇ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತಾ ಕಲಂ 115(2) ಸಹವಾಚಕ ಕಲಂ 3(5) ರಂತೆ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, ನಿಮ್ಮಲ್ಲಿ 1 ನೇ ಆರೋಪಿ ಕಬ್ಬಿಣದ ಕುಡುಗೋಲಿನಿಂದ ಚಾಸಾ-1 ರವರ ತಲೆಯ ಮಧ್ಯಭಾಗಕ್ಕೆ ಹೊಡೆದಿರುತ್ತೀರಿ ಮತ್ತು ಅವರಿಗೆ ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯ 1 ರಿಂದ 3 ನೇ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತಾ ಕಲಂ 118(1) ಸಹವಾಚಕ ಕಲಂ 3(5) ರಂತೆ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ನೀವು 1 ರಿಂದ 3 ನೇ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, ನಿಮ್ಮಲ್ಲಿ 1 ನೇ ಆರೋಪಿ ಚಾಸಾ-1 ರವರಿಗೆ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯ 1 ರಿಂದ 3 ನೇ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತಾ ಕಲಂ 351(3) ಸಹವಾಚಕ ಕಲಂ 3(5) ರಂತೆ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ನೀವು 1 ರಿಂದ 3 ನೇ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, ನಿಮ್ಮಲ್ಲಿ 1 ನೇ ಆರೋಪಿ ಚಾಸಾ-1 ರವರನ್ನು ಹಿಡಿದುಕೊಂಡು ಎಳೆದಾಡಿ ಧರಿಸಿದ್ದ ಬಟ್ಟೆಗಳನ್ನು ಎಳೆದಿರುತ್ತೀರಿ ಹಾಗೂ ಅವರ ಮಾನಕ್ಕೆ ಭಂಗ ಬರುವಂತೆ ಮಾಡಿರುತ್ತೀರಿ. ಈ ರೀತ್ಯ 1 ರಿಂದ 3 ನೇ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತಾ ಕಲಂ 74 ಸಹವಾಚಕ ಕಲಂ 3(5)

ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಸದರಿ ಮೇಲ್ಕಂಡ 1 ರಿಂದ 3 ನೇ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮೇಲೆ ಹೇಳಿದ ಅಪರಾದಗಳನ್ನು ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದೆಂದು ಆದೇಶಿಸಲಾಗಿದೆ.

ಪ್ರಃ1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದಿರಾ? ಅವುಗಳು ನಿಮಗೆ ಅರ್ಥವಾಯಿತೇ?

ಆರೋಪಿಗಳ ಉತ್ತರಃ

ಆರೋಪಿ 1: Yes

ಆರೋಪಿ 2: Yes

ಆರೋಪಿ 3: Yes

ಪ್ರಃ2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಗಳ ಉತ್ತರಃ

ಆರೋಪಿ 1: Pleaded not guilty and claimed to be tried

ಆರೋಪಿ 2: Pleaded not guilty and claimed to be tried

ಆರೋಪಿ 3: Pleaded not guilty and claimed to be tried

(ಆರೋಪಿತರಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣಿಕರಿಸುತ್ತೇನೆ)

ದಿನಾಂಕ : 22.03.2025

ಸಹಿ/-

(ರಾಹುಲ್ ಶೆಟ್ಟಿಗಾರ್)

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ

ಪ್ರ.ದ.ನ್ಯಾದಂ., ತರೀಕೆರೆ.

ಆರೋಪಿತರ ಸಹಿಃ